# ರಂಗಭೂಮಿ (ರಿ.) ಉಡುಪಿ

(ಕರ್ನಾಟಕ ನಾಟಕ ಅಕಾಡಮಿಯಲ್ಲಿ ನೊಂದಾಯಿಸಲ್ಪಟ್ಟಿದೆ.)

ಕರಂಬಳ್ಳಿ ವೆಂಕಟರಮಣ ದೇವಸ್ಥಾನ ರಸ್ತೆ, ದೊಡ್ಡಣಗುಡ್ಡೆ.

ಕುಂಜಿಬೆಟ್ಟು ಅಂಚೆ, ಉಡುಪಿ – 576102

ಸ್ಥಾಪನೆ : 1965

ಮೊ : 9448952847
9844742166
9845111449
9449367595


## 45ನೆಯ ರಾಜ್ಯಮಟ್ಟದ ಕನ್ನಡ ನಾಟಕ ಸ್ಪರ್ಧೆ – 2024

**(ದಿ| ಡಾ| ಟಿ.ಎಂ.ಎ.ಪೈ, ದಿ| ಎಸ್.ಎಲ್. ನಾರಾಯಣ ಭಟ್ ಮತ್ತು ದಿ| ಮಲ್ಪೆ ಮಧ್ವರಾಜ್ ಸ್ಮಾರಕ)**

ಹವ್ಯಾಸಿ ಕನ್ನಡ ರಂಗಭೂಮಿಯನ್ನು ಪ್ರೋತ್ಸಾಹಿಸಿ ಜೀವಂತವಾಗಿರಿಸುವ ಹಾಗೂ ಉಡುಪಿ ಮತ್ತು ಪರಿಸರದ ಕಲಾಭಿಮಾನಿಗಳಿಗೆ ಶ್ರೇಷ್ಠ ಮಟ್ಟದ ನಾಟಕಗಳನ್ನು ವೀಕ್ಷಿಸಲು ಅವಕಾಶವನ್ನೊದಗಿಸುವ ಸದುದ್ದೇಶದಿಂದ **ರಂಗಭೂಮಿ ಸಂಸ್ಥೆಯ ಹಿರಿಯರಾದ ಡಾ. ಹೆಚ್. ಶಾಂತರಾಮ್** ಅವರ ಕನಸಿನ ಕೂಸಾದ ಈ ನಾಟಕ ಸ್ಪರ್ಧೆಯನ್ನು ಕಳೆದ ನಲವತ್ತಮೂರು ವರ್ಷಗಳಂತೆ ಈ ವರ್ಷವೂ ಅವರ ಮಾರ್ಗದರ್ಶನದಲ್ಲಿ ಇದೇ ಬರುವ ನವಂಬರ್ ತಿಂಗಳ 3ನೇ ವಾರದಲ್ಲಿ ಕರ್ನಾಟಕ ರಾಜ್ಯ ಮಟ್ಟದ ಕನ್ನಡ ನಾಟಕ ಸ್ಪರ್ಧೆಯನ್ನು ಉಡುಪಿಯಲ್ಲಿ ಏರ್ಪಡಿಸಲು ನಿಶ್ಚಯಿಸಿರುತ್ತೇವೆ. ರಾಜ್ಯದಲ್ಲೇ ಪ್ರತಿಷ್ಠಿತವೆನಿಸಿರುವ ಈ ಸ್ಪರ್ಧೆಯಲ್ಲಿ ಸುವ್ಯವಸ್ಥಿತ ನಾಟಕ ವಸ್ತು, ನಿರ್ದೇಶನ, ಅಭಿನಯ, ಅಭಿವ್ಯಕ್ತಿ, ರಂಗತಂತ್ರ, ಔಚಿತ್ಯಪೂರ್ಣ ರಂಗಪರಿಕರಗಳ ಬಳಕೆ, ಬೆಳಕು, ಸಂಗೀತ, ಪ್ರಸಾಧನ ಮತ್ತು ಒಟ್ಟು ಪರಿಶ್ರಮಗಳ ಕಡೆಗೆ ಗಮನ ಕೊಡಲಾಗುವುದು.

### ಸ್ಪರ್ಧೆಯ ನಿಯಮಾವಳಿ

1. ಕರ್ನಾಟಕ ರಾಜ್ಯದ ಮತ್ತು ಕಾಸರಗೋಡು ಜಿಲ್ಲೆಯ ಹವ್ಯಾಸಿ ನಾಟಕ ತಂಡಗಳು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಉಡುಪಿಯಲ್ಲಿ **ನವಂಬರ್ 20ರಿಂದ** ಆರಂಭಿಸುವ ಉದ್ದೇಶವಿದೆ. ರಂಗಮಂಟಪದ ಅಳತೆಯನ್ನು ಮುಂದೆ ತಿಳಿಸಲಾಗುವುದು.

2. ಸಾಮಾಜಿಕ, ಜಾನಪದ, ಪೌರಾಣಿಕ ಯಾ ಚಾರಿತ್ರಿಕ ಕಥಾವಸ್ತುಗಳಲ್ಲಿ ಆಧುನಿಕ ಪ್ರಜ್ಞೆ ಮೂಡಿಸುವ ಸೃಜನಶೀಲ ನಾಟಕಗಳನ್ನು ಅಭಿನಯಿಸಲು ಅವಕಾಶವಿದೆ. ಹೊಸ ನಾಟಕಗಳಿಗೆ ಆದ್ಯತೆ ನೀಡಲಾಗುವುದು.

3. ಪ್ರವೇಶ ಪತ್ರದೊಂದಿಗೆ **ಪ್ರವೇಶ ಶುಲ್ಕ ರೂ. 2,000/– ವನ್ನು ನಾಟಕ ಸ್ಪರ್ಧಾ ಸಮಿತಿ, ರಂಗಭೂಮಿ (ರಿ.) ಉಡುಪಿ** ಈ ಹೆಸರಿಗೆ ಕ್ರಾಸ್ ಮಾಡಿದ ಹಾಗೂ ಉಡುಪಿಯಲ್ಲಿ ಪಾವತಿಯಾಗುವಂತೆ ರಾಷ್ಟ್ರೀಕೃತ ಬ್ಯಾಂಕ್ ಡ್ರಾಫ್ಟ್ ಮೂಲಕ **ಕಡ್ಡಾಯವಾಗಿ** ಲಗ್ತೀಕರಿಸಬೇಕು. **ಚೆಕ್ ಮೂಲಕ ಪ್ರವೇಶ ಶುಲ್ಕವನ್ನು ಸ್ವೀಕರಿಸಲಾಗುವುದಿಲ್ಲ.** ಪ್ರವೇಶ ಶುಲ್ಕವನ್ನು ಲಗ್ತೀಕರಿಸದ ಪ್ರವೇಶ ಪತ್ರವನ್ನು ಪರಿಗಣಿಸಲಾಗುವುದಿಲ್ಲ. ಅಸ್ವೀಕೃತ ಸ್ಪರ್ಧಾ ತಂಡಗಳ ಪ್ರವೇಶ ಶುಲ್ಕವನ್ನು ಹಿಂದಿರುಗಿಸಲಾಗುವುದು. ಸ್ವೀಕೃತ ತಂಡಗಳ ಪ್ರವೇಶ ಶುಲ್ಕವನ್ನು ಆಯಾ ದಿನದ ನಾಟಕಾಭಿನಯ ಮುಗಿದ ಕೂಡಲೇ ನಗದಾಗಿ ಮರುಪಾವತಿ ಮಾಡಲಾಗುವುದು.

4. ನಾಟಕದ ಅವಧಿ ಒಂದೂವರೆ ತಾಸು, ಗರಿಷ್ಠ ಎರಡೂಕಾಲು ತಾಸುಗಳಿಗೆ ಪರಿಮಿತವಾಗಿರಬೇಕು. ಈ ನಿಯಮವನ್ನು ಮೀರುವ ನಾಟಕಗಳನ್ನು ಸ್ಪರ್ಧೆಗೆ ಪರಿಗಣಿಸಲಾಗುವುದಿಲ್ಲ. **ಅವಧಿ ತಲುಪದ ಅಥವಾ ಅವಧಿ ಮೀರಿದ ನಾಟಕಗಳು ಸ್ಪರ್ಧೆಯ ಯಾವುದೇ ಬಹುಮಾನಗಳಿಗೆ ಪರಿಗಣಿಸಲ್ಪಡುವುದಿಲ್ಲ. ಅಲ್ಲದೆ ಪ್ರಯಾಣ ವೆಚ್ಚ ಕೊಡಲಾಗುವುದಿಲ್ಲ ಮತ್ತು ಪ್ರವೇಶ ಶುಲ್ಕವನ್ನು ಮುಟ್ಟುಗೋಲು ಹಾಕಲಾಗುವುದು ಹಾಗೂ ಗೌರವಧನವನ್ನು ನೀಡಲಾಗುವುದಿಲ್ಲ.**

5. ಪ್ರದರ್ಶನಕ್ಕೆ ಅಗತ್ಯವಾದ ಮೂರು ಫ್ಲೈನ್ ಪರದೆಗಳನ್ನು, ಧ್ವನಿವರ್ಧಕಗಳನ್ನು ಮತ್ತು ರಂಗಸಜ್ಜಿಕೆಗೆ ಬೇಕಾಗುವ ಕೆಲವು ಮರದ ಫ್ಲಾಟ್ ಫೋರ್ಮ್‌ಗಳನ್ನು ಸ್ಪರ್ಧಾ ಸಮಿತಿಯು ಒದಗಿಸುತ್ತದೆ. ವಿಶೇಷ ರಂಗಪರಿಕರ, ವೇಷಭೂಷಣ ಇತ್ಯಾದಿಗಳನ್ನು ಸ್ಪರ್ಧಾ ತಂಡವೇ ಪೂರೈಸಿಕೊಳ್ಳಬೇಕು. ಬೆಳಕಿನ ವ್ಯವಸ್ಥೆಗೆ ನಮ್ಮಲ್ಲಿ ಲಭ್ಯವಿರುವ ಸ್ಪಾಟ್ ಲೈಟುಗಳು ಮತ್ತು ಡಿಮ್ಮರುಗಳನ್ನು **ಉಚಿತವಾಗಿ** ಒದಗಿಸಲಾಗುವುದು. ಈ ವಿವರಗಳನ್ನು ಅನಂತರ ತಿಳಿಸಲಾಗುವುದು. ಹೆಚ್ಚಿನ ಬೆಳಕಿನ ವ್ಯವಸ್ಥೆಗಳನ್ನು ಸ್ಪರ್ಧಾ ತಂಡವೇ ಮಾಡಿಕೊಳ್ಳಬೇಕು.

6. ಅಭಿನಯಿಸುವ ನಾಟಕದ ಗ್ರಂಥ ಕರ್ತೃವಿಗೆ ಗೌರವಧನ ಸಲ್ಲಿಸಿ, ಅವರಿಂದ ನಾಟಕ ಪ್ರದರ್ಶನಕ್ಕೆ ಪೂರ್ವಾನುಮತಿ ಪಡೆಯುವುದು ಸ್ಪರ್ಧಾತಂಡದ ಹೊಣೆಯಾಗಿರುತ್ತದೆ. **ನಾಟಕ ಕರ್ತೃವಿನ ಅನುಮತಿ ಪತ್ರವನ್ನು ನಾಟಕ ಪ್ರದರ್ಶನಕ್ಕೆ ಮೊದಲು ಸ್ಪರ್ಧಾ ಸಮಿತಿಗೆ ಕಡ್ಡಾಯವಾಗಿ ತೋರಿಸಬೇಕು.**

7. ಒಂದು ಸಂಸ್ಥೆ ಒಂದಕ್ಕಿಂತ ಹೆಚ್ಚು ನಾಟಕಗಳನ್ನು ಪ್ರದರ್ಶಿಸಲು ಮತ್ತು ಒಬ್ಬ ನಿರ್ದೇಶಕ, ಕಲಾವಿದ ಯಾ ಕಲಾವಿದೆ (ಲೈಟ್ ಆಪರೇಟರ್ ಮತ್ತು ಪ್ರಸಾಧನ ಕಲಾವಿದರನ್ನು ಹೊರತುಪಡಿಸಿ) ಒಂದಕ್ಕಿಂತ ಹೆಚ್ಚು ನಾಟಕಗಳಲ್ಲಿ ಪಾಲುಗೊಳ್ಳಲು ಅವಕಾಶವಿಲ್ಲ.

8. ನಾಟಕದ ಕೃತಿಯ ಒಂದು ಪ್ರತಿಯನ್ನು ಪ್ರವೇಶ ಪತ್ರದೊಂದಿಗೆ **ಕಡ್ಡಾಯವಾಗಿ ಲಗ್ತೀಕರಿಸಬೇಕು.**

9. ಪರಸ್ಥಳದ ತಂಡಗಳಿಗೆ ಅಗತ್ಯವಿದ್ದರೆ ಒಂದು ದಿನದ ಮಟ್ಟಿಗೆ ಉಳಿದುಕೊಳ್ಳುವ ಸ್ಥಳಾವಕಾಶವನ್ನು ಉಚಿತವಾಗಿ ಒದಗಿಸಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸುವ ತಂಡಗಳಿಗೆ ಈ ಕೆಳಗಿನಂತೆ ಪ್ರಯಾಣ ವೆಚ್ಚವನ್ನು ಅಂಶಿಕವಾಗಿ ನೀಡಲಾಗುವುದು.

   **ಉಡುಪಿಗೆ ಬಂದು ಹೋಗುವ ಒಟ್ಟು ದೂರಕ್ಕೆ ಪ್ರತಿ ಕಿ.ಮೀ.ಗೆ ರೂ. 20/–ರಂತೆ. ಕನಿಷ್ಠ ರೂ. 2,000/–, ಗರಿಷ್ಠ ರೂ. 22,000/– ನೀಡಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸುವ ಪ್ರತೀ ತಂಡಕ್ಕೆ ರೂ. 5,000/– ಗೌರವಧನ ನೀಡಲಾಗುವುದು.**

10. **ಸ್ಪರ್ಧಾ ನಾಟಕದಲ್ಲಿ ಧ್ವನಿಮುದ್ರಿತ ಸಂಭಾಷಣೆಗಳನ್ನು ಮತ್ತು ಸಂಗೀತವನ್ನು (ಹಿನ್ನಲೆ ವಿಶಿಷ್ಠ ಧ್ವನಿ ಪ್ರಕಾರಗಳನ್ನು ಹೊರತು ಪಡಿಸಿ) ಬಳಸುವುದಕ್ಕೆ ಅವಕಾಶವಿಲ್ಲ.**

11. ಸ್ಪರ್ಧಾ ನಾಟಕದಲ್ಲಿ ಅಭಿನಯಿಸುವ **ಪಾತ್ರಧಾರಿಗಳಿಗೆ ಮತ್ತು ಗರಿಷ್ಠ ಎಂಟು ಮಂದಿ ಹಿನ್ನಲೆ ಕಲಾವಿದರಿಗೆ ಮಾತ್ರ** ಸಂಜೆಯ ಉಪಾಹಾರ ಮತ್ತು ರಾತ್ರಿ ಊಟವನ್ನು ಉಚಿತವಾಗಿ ಒದಗಿಸಲಾಗುವುದು. ದೂರದ ಊರುಗಳಿಂದ ಬೆಳಿಗ್ಗೆಯೇ ಆಗಮಿಸುವ ತಂಡಗಳು **ಮುಂಚಿತವಾಗಿ ತಿಳಿಸಿದಲ್ಲಿ ಮಾತ್ರ**, ಮಧ್ಯಾಹ್ನದ ಊಟವನ್ನು ಉಚಿತವಾಗಿ ಒದಗಿಸಲಾಗುವುದು. ಹೆಚ್ಚಿನ ಅವಶ್ಯಕತೆಗಳ ವೆಚ್ಚವನ್ನು ಸ್ಪರ್ಧಾ ತಂಡವೇ ಭರಿಸಬೇಕು.

12. ನಾಟಕದಲ್ಲಿ ಅಭಿನಯಿಸುವ ಕಲಾವಿದರ ಮತ್ತು ಪಾಲ್ಗೊಳ್ಳುವ ಹಿನ್ನೆಲೆ ಕಲಾವಿದರ ಹೆಸರುಗಳನ್ನು ಅಲ್ಲದೆ ಸ್ಪರ್ಧೆಯ ಸ್ಮರಣ ಸಂಚಿಕೆಯಲ್ಲಿ ಪ್ರಕಟಿಸುವ ಸಲುವಾಗಿ **ತಂಡದ ಪರಿಚಯ ಲೇಖನವನ್ನು ನಾಟಕ ಪ್ರದರ್ಶನಕ್ಕೆ ಮುಂಚಿತವಾಗಿ ಸ್ಪರ್ಧಾ ಸಮಿತಿಗೆ ತಪ್ಪದೆ ಕಡ್ಡಾಯವಾಗಿ ಒಪ್ಪಿಸಬೇಕು.**

13. **ಪ್ರವೇಶ ಪತ್ರವನ್ನು ಸ್ವೀಕರಿಸಲು ಕೊನೆಯ ದಿನಾಂಕ: 18-10-2024. ಅನಂತರ ಬಂದ ಪ್ರವೇಶ ಪತ್ರಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಸ್ಪರ್ಧೆಗೆ ಗರಿಷ್ಠ 12 ತಂಡಗಳನ್ನು ಮಾತ್ರ ಆಯ್ಕೆ ಮಾಡಲಾಗುವುದು.**
14. ಸ್ಪರ್ಧೆಗೆ ನಾಟಕಗಳನ್ನು ಆಯ್ಕೆ ಮಾಡುವ ಅಥವಾ ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಸಂಪೂರ್ಣ ಹಕ್ಕು ಸ್ಪರ್ಧಾ ಸಮಿತಿಗೆ ಸೇರಿದೆ. ಆಯ್ಕೆಯಾದ ತಂಡಗಳಿಗೆ ಪತ್ರ ಮುಖೇನ ತಿಳಿಸಲಾಗುವುದು.
15. ಸ್ಪರ್ಧಾ ಸಮಿತಿಯಿಂದ ಆಯ್ಕೆಗೊಂಡ ಯಾವುದೇ ತಂಡವು ನಿಶ್ಚಿತ ದಿನದಂದು ತನ್ನ ನಾಟಕವನ್ನು ಪ್ರದರ್ಶಿಸಲು ಒಪ್ಪಿಕೊಂಡ ಬಳಿಕ ಮತ್ತೆ ಹಿಂದೆಗೆಯಲು ಅವಕಾಶವಿಲ್ಲ. **ಹಿಂದೆಗೆದಲ್ಲಿ ಅವರ ಪ್ರವೇಶ ಶುಲ್ಕವನ್ನು ಮರಳಿಸಲಾಗುವುದಿಲ್ಲ.**
16. ಆಯ್ಕೆಗೊಂಡ ಸ್ಪರ್ಧಾ ನಾಟಕಗಳ ಪ್ರದರ್ಶನ ದಿನಾಂಕವನ್ನು ನಿಶ್ಚಯಿಸುವಲ್ಲಿ ಸ್ಪರ್ಧಾ ಸಮಿತಿಯ ನಿರ್ಧಾರವೇ ಅಂತಿಮವಾದುದು. **ಸ್ಪರ್ಧೆಗೆ ಒಮ್ಮೆ ಆಯ್ಕೆಯಾದ ನಾಟಕವನ್ನು ಮತ್ತು ಪ್ರದರ್ಶನ ದಿನಾಂಕವನ್ನು ಬದಲಾಯಿಸುವುದಕ್ಕೆ ಅವಕಾಶವಿಲ್ಲ.**
17. ವಿಜೇತ ತಂಡಗಳಿಗೆ ನೀಡಲಾಗುವ ಪರ್ಯಾಯ ಫಲಕಗಳನ್ನು ಸಂಬಂಧಪಟ್ಟ ತಂಡಗಳು ಮುಂದಿನ ಸ್ಪರ್ಧೆಗೆ ಕನಿಷ್ಠ ಎರಡು ತಿಂಗಳ ಮೊದಲು ಸ್ಪರ್ಧಾ ಸಮಿತಿಗೆ ಹಿಂದಿರುಗಿಸಬೇಕು. ಈ ಬಗ್ಗೆ ಅವರ ಸಮ್ಮತಿಯನ್ನು ಲಿಖಿತವಾಗಿ ನೀಡಬೇಕು.
18. **ಸ್ಪರ್ಧೆಯಲ್ಲಿ ಪ್ರಥಮ ಬಹುಮಾನಗಳಿಸಿದ ನಾಟಕದ ಮರು ಪ್ರದರ್ಶನವನ್ನು ಬಹುಮಾನ ವಿತರಣಾ ಸಮಾರಂಭದ ಸಂದರ್ಭದಲ್ಲಿ ಕಡ್ಡಾಯವಾಗಿ ನೀಡಬೇಕು.** ಈ ಬಗ್ಗೆ ತಂಡದ ಬಸ್ ಪ್ರಯಾಣ ವೆಚ್ಚವನ್ನು ನೀಡಲಾಗುವುದು. ಅಲ್ಲದೆ ಪ್ರದರ್ಶನ ದಿನದ ಉಚಿತ ವಸತಿ, ಊಟೋಪಚಾರಗಳ ವ್ಯವಸ್ಥೆ ಮಾಡಲಾಗುವುದು.
19. ಮೇಲಿನ ಯಾವುದೇ ನಿಯಮವನ್ನು ಪಾಲಿಸದ ತಂಡವನ್ನು ಸ್ಪರ್ಧೆಯಿಂದ ಹೊರಗಿಡುವ ಹಕ್ಕನ್ನು ಸ್ಪರ್ಧಾ ಸಮಿತಿಯು ಹೊಂದಿರುತ್ತದೆ.
20. ಸ್ಪರ್ಧೆಯಲ್ಲಿ ಭಾಗವಹಿಸಿದ ಅತ್ಯಂತ ಶಿಸ್ತುಬದ್ಧ ತಂಡಕ್ಕೆ ಜಿ. ಎಸ್. ರಾಮರಾವ್ ಸ್ಮರಣಾರ್ಥ ಸಂಚಯ ಟ್ರಸ್ಟ್ ಬೆಂಗಳೂರು ಇವರ ಕೊಡುಗೆಯ ವಿಶೇಷ ನಗದು ಪುರಸ್ಕಾರವಿರುವುದು.


| **ಡಾ। ತಲ್ಲೂರು ಶಿವರಾಮ ಶೆಟ್ಟಿ** | **ಭಾಸ್ಕರ ರಾವ್ ಕಿದಿಯೂರು** | **ಎನ್. ರಾಜಗೋಪಾಲ ಬಲ್ಲಾಳ್** | **ಪ್ರದೀಪ್‌ಚಂದ್ರ ಕುತ್ಪಾಡಿ** |
|---|---|---|---|
| (ಮೊ : 9844073118) | (ಮೊ : 9844742166) | (ಮೊ : 9845640228) | ಮೊಬೈಲ್ : 9448952847 |
| ಅಧ್ಯಕ್ಷರು | ಉಪಾಧ್ಯಕ್ಷರು | | ಪ್ರಧಾನ ಕಾರ್ಯದರ್ಶಿ |

**ಶ್ರೀಪಾದ ಹೆಗಡೆ (9845111449) ಹಾಗೂ ವಿವೇಕಾನಂದ ಎನ್. (9449367595)**
ಜತೆಕಾರ್ಯದರ್ಶಿಗಳು


*******

## <u>ಸ್ಪರ್ಧೆಗೆ ಘೋಷಿತ ಬಹುಮಾನಗಳು</u>

1. ಶ್ರೇಷ್ಠ ನಾಟಕ 1 : ದಿ। ಪುತ್ತು ವೈಕುಂಠ ಶೇಟ್ ಸ್ಮಾರಕ ಪ್ರಥಮ ನಗದು ಬಹುಮಾನ ರೂ. 35,000 ಮತ್ತು ಸ್ಮರಣಿಕೆ ಹಾಗೂ ಡಾ। ಟಿ.ಎಂ.ಎ. ಪೈ ಸ್ಮಾರಕ ಪರ್ಯಾಯ ಫಲಕ

   ಶ್ರೇಷ್ಠ ನಾಟಕ 2 : ದಿ। ಮಲ್ಪೆ ಮಧ್ವರಾಜ್ ಸ್ಮಾರಕ ಅವರ ಪುತ್ರ ಶ್ರೀ ಪ್ರಮೋದ್ ಮಧ್ವರಾಜ್‌ರವರ ಕೊಡುಗೆ ದ್ವಿತೀಯ ನಗದು ಬಹುಮಾನ ರೂ. 25,000 ಮತ್ತು ಸ್ಮರಣಿಕೆ ಹಾಗೂ ಡಾ। ಆರ್. ಪಿ. ಕೊಪ್ಪೀಕರ್ ಸ್ಮಾರಕ ಪರ್ಯಾಯ ಫಲಕ

   ಶ್ರೇಷ್ಠ ನಾಟಕ 3 : ದಿ। ಪಡುಕುದ್ರು ವಾಸುದೇವ ರಾವ್ ಸ್ಮರಣಾರ್ಥ ಅವರ ಧರ್ಮಪತ್ನಿ ಶ್ರೀಮತಿ ಸೀತಾ ವಾಸುದೇವ ರಾವ್ ಮತ್ತು ಮಕ್ಕಳ ಕೊಡುಗೆ ಸ್ಮಾರಕ ತೃತೀಯ ನಗದು ಬಹುಮಾನ ರೂ. 15,000 ಮತ್ತು ಸಖೂಬಾಯಿ ಶ್ರೀಧರ ನಾಯಕ್ ಕೊಕ್ಕರ್ಣೆ ಸ್ಮಾರಕ ಸ್ಮರಣಿಕೆ.

2. ಶ್ರೇಷ್ಠ ನಿರ್ದೇಶನ 1 : ರಂಗ ನಿರ್ದೇಶಕ ದಿ। ವಿದ್ವಾನ್ ಕುತ್ಪಾಡಿ ವೆಂಕಟಾಚಲ ಭಟ್ ಸ್ಮಾರಕ ಅವರ ಪುತ್ರ ಬಾಲಕೃಷ್ಣ ಭಟ್‌ರವರ ಕೊಡುಗೆ ನಗದು ಪ್ರಥಮ ಬಹುಮಾನ ರೂ. 5,000 ಮತ್ತು ರಂಗಕರ್ಮಿ ದಿ। ಜಿ.ಕೆ. ಐತಾಳ್ ಸ್ಮಾರಕ ಅವರ ಪುತ್ರ ಅನಂತ ಐತಾಳ್ ಅವರ ಕೊಡುಗೆ ರೂ. 5,000ದಂತೆ ಒಟ್ಟು ರೂ.10,000/- ಹಾಗೂ ಡಾ। ಟಿ.ಎಂ.ಎ.ಪೈ. ಸ್ಮಾರಕ ಪರ್ಯಾಯ ಫಲಕ ಹಾಗೂ ಮಲ್ಪೆ ಮಧ್ವರಾಜ್ ಸ್ಮಾರಕ ಸ್ಮರಣಿಕೆ

   ಶ್ರೇಷ್ಠ ನಿರ್ದೇಶನ 2: ರಂಗ ನಿರ್ದೇಶಕ ದಿ। ವಿದ್ವಾನ್ ಕುತ್ಪಾಡಿ ವೆಂಕಟಾಚಲ ಭಟ್ ಸ್ಮಾರಕ ಅವರ ಪುತ್ರ ಬಾಲಕೃಷ್ಣ ಭಟ್‌ರವರ ಕೊಡುಗೆ ನಗದು ದ್ವಿತೀಯ ಬಹುಮಾನ ರೂ. 3,000 ಮತ್ತು ದಿ। ಜಿ.ಕೆ. ಐತಾಳ್ ಸ್ಮಾರಕ ಅವರ ಪುತ್ರ ಅನಂತ ಐತಾಳ್ ಅವರ ಕೊಡುಗೆ ರೂ. 3,000ದಂತೆ ಒಟ್ಟು ರೂ.6,000/- ಹಾಗೂ ದಿ। ವಿ. ಪ್ರಭಾಕರ ಹೆಗ್ಡೆ ಸ್ಮಾರಕ ಸ್ಮರಣಿಕೆ.

   ಶ್ರೇಷ್ಠ ನಿರ್ದೇಶನ 3: ರಂಗ ನಿರ್ದೇಶಕ ದಿ। ವಿದ್ವಾನ್ ಕುತ್ಪಾಡಿ ವೆಂಕಟಾಚಲ ಭಟ್ ಸ್ಮಾರಕ ಅವರ ಪುತ್ರ ಬಾಲಕೃಷ್ಣ ಭಟ್‌ರವರ ಕೊಡುಗೆ ನಗದು ತೃತೀಯ ಬಹುಮಾನ ರೂ. 2,000 ಮತ್ತು ದಿ। ಜಿ.ಕೆ. ಐತಾಳ್ ಸ್ಮಾರಕ ಅವರ ಪುತ್ರ ಅನಂತ ಐತಾಳ್ ಅವರ ಕೊಡುಗೆ ರೂ. 2,000ದಂತೆ ಒಟ್ಟು ರೂ. 4,000/- ಹಾಗೂ ದಿ। ಡಾ। ಬಿ.ಬಿ. ಸ್ಮಾರಕ ಸ್ಮರಣಿಕೆ.

3. ಶ್ರೇಷ್ಠ ನಟ 1 : ದಿ। ಪಾಡಿಗಾರು ಶೀನ ಶೆಟ್ಟಿ ಸ್ಮರಣಾರ್ಥ ಅವರ ಪುತ್ರ ಶ್ರೀ ಪಿ. ಆನಂದ ಶೆಟ್ಟಿಯವರ ಕೊಡುಗೆ ಪ್ರಥಮ ನಗದು ಬಹುಮಾನ ರೂ. 3,000 ಮತ್ತು ಶ್ರೀ ಜನಾರ್ದನ ಮತ್ತು ಮಹಾಕಾಳಿ ದೇವಸ್ಥಾನ, ಅಂಬಲಪಾಡಿ ಪ್ರಾಯೋಜಿತ ಸ್ಮರಣಿಕೆ.

   ಶ್ರೇಷ್ಠ ನಟ 2 : ದಿ। ಪಾಡಿಗಾರು ಶೀನ ಶೆಟ್ಟಿ ಸ್ಮರಣಾರ್ಥ ಅವರ ಪುತ್ರ ಶ್ರೀ ಪಿ. ಆನಂದ ಶೆಟ್ಟಿಯವರ ಕೊಡುಗೆ ದ್ವಿತೀಯ ನಗದು ಬಹುಮಾನ ರೂ. 2,000 ಮತ್ತು ಶ್ರೀ ಜನಾರ್ದನ ಮತ್ತು ಮಹಾಕಾಳಿ ದೇವಸ್ಥಾನ, ಅಂಬಲಪಾಡಿ ಪ್ರಾಯೋಜಿತ ಸ್ಮರಣಿಕೆ.

   ಶ್ರೇಷ್ಠ ನಟ 3 : ದಿ। ಪಾಡಿಗಾರು ಶೀನ ಶೆಟ್ಟಿ ಸ್ಮರಣಾರ್ಥ ಅವರ ಪುತ್ರ ಶ್ರೀ ಪಿ. ಆನಂದ ಶೆಟ್ಟಿಯವರ ಕೊಡುಗೆ ತೃತೀಯ ನಗದು ಬಹುಮಾನ ರೂ. 1,000 ಮತ್ತು ರೋಟರಿ ಕ್ಲಬ್ ಉಡುಪಿ- ಮಣಿಪಾಲ ಪ್ರಾಯೋಜಿತ ಸ್ಮರಣಿಕೆ.

4. ಶ್ರೇಷ್ಠ ನಟಿ 1 : ರಂಗನಟಿ ಡಾ. ಮಾಧವಿ ಎಸ್. ಭಂಡಾರಿ ಪ್ರಾಯೋಜಿತ ಪ್ರಥಮ ನಗದು ಬಹುಮಾನ ರೂ. 3,000 ಮತ್ತು ಶ್ರೇಷ್ಠ ರಂಗನಟ ದಿ। ಶ್ರೀನಿವಾಸ ಶೆಟ್ಟಿಗಾರ್ ಸ್ಮಾರಕ ಸ್ಮರಣಿಕೆ

ಶ್ರೇಷ್ಠ ನಟಿ 2 : ರಂಗನಟಿ ಡಾ. ಮಾಧವಿ ಎಸ್. ಭಂಡಾರಿ ಪ್ರಾಯೋಜಿತ ದ್ವಿತೀಯ ನಗದು ಬಹುಮಾನ ರೂ. 2,000 ಮತ್ತು ಶ್ರೇಷ್ಠ ರಂಗನಟ ದಿ। ಶ್ರೀನಿವಾಸ ಶೆಟ್ಟಿಗಾರ್ ಸ್ಮಾರಕ ಸ್ಮರಣಿಕೆ

ಶ್ರೇಷ್ಠ ನಟಿ 3 : ಅಭಿನೇತ್ರಿ ಶ್ರೀಮತಿ ವಿನಯಾ ಪ್ರಸಾದ್ ಪ್ರಾಯೋಜಿತ ತೃತೀಯ ನಗದು ಬಹುಮಾನ ರೂ. 1,000 ಮತ್ತು ಹೋಟೇಲ್ ತಾಂಬೂಲಂ ಪ್ರಾಯೋಜಿತ ಸ್ಮರಣಿಕೆ

5. ಶ್ರೇಷ್ಠ ಸಂಗೀತ 1 : ರಂಗ ನಟ ಎನ್. ರಾಜಗೋಪಾಲ ಬಲ್ಲಾಳ್ ಪ್ರಾಯೋಜಿತ ಪ್ರಥಮ ನಗದು ಬಹುಮಾನ ರೂ. 3000 ಮತ್ತು ದಿ। ಉಡುಪಿ ದಾಸ ಭಟ್ ಸ್ಮಾರಕ ಸ್ಮರಣಿಕೆ

ಶ್ರೇಷ್ಠ ಸಂಗೀತ 2 : ರಂಗ ನಟ ಎನ್. ರಾಜಗೋಪಾಲ ಬಲ್ಲಾಳ್ ಪ್ರಾಯೋಜಿತ ದ್ವಿತೀಯ ನಗದು ಬಹುಮಾನ ರೂ. 2000 ಮತ್ತು ದಿ। ಉಡುಪಿ ದಾಸ ಭಟ್ ಸ್ಮಾರಕ ಸ್ಮರಣಿಕೆ

ಶ್ರೇಷ್ಠ ಸಂಗೀತ 3 : ರಂಗ ನಟ ಎನ್. ರಾಜಗೋಪಾಲ ಬಲ್ಲಾಳ್ ಪ್ರಾಯೋಜಿತ ತೃತೀಯ ನಗದು ಬಹುಮಾನ ರೂ. 1000 ಮತ್ತು ಹೋಟೇಲ್ ಡಯಾನಾ ಪ್ರಾಯೋಜಿತ ಸ್ಮರಣಿಕೆ

6. ಶ್ರೇಷ್ಠ ಪರಿಕರ 1 : ದಿ। ರವಿಂದ್ರ ಬಿ. ಕೋಟ್ಯಾನ್ ಸ್ಮರಣಾರ್ಥ ಅವರ ಧರ್ಮಪತ್ನಿ ಪ್ರತಿಮಾ ಹಾಗೂ ಮೊಮ್ಮಗಳು ಅನೈರಾ ಅವರ ಕೊಡುಗೆ ಪ್ರಥಮ ನಗದು ಬಹುಮಾನ ರೂ. 3,000 ಮತ್ತು ಡಾ. ಟಿ.ಎಂ.ಎ. ಪೈ ಪ್ರತಿಷ್ಠಾನ ಪ್ರಾಯೋಜಿತ ಸ್ಮರಣಿಕೆ

ಶ್ರೇಷ್ಠ ಪರಿಕರ 2 : ದಿ। ರವಿಂದ್ರ ಬಿ. ಕೋಟ್ಯಾನ್ ಸ್ಮರಣಾರ್ಥ ಅವರ ಧರ್ಮಪತ್ನಿ ಪ್ರತಿಮಾ ಹಾಗೂ ಮೊಮ್ಮಗಳು ಅನೈರಾ ಅವರ ಕೊಡುಗೆ ದ್ವಿತೀಯ ನಗದು ಬಹುಮಾನ ರೂ. 2,000 ಮತ್ತು ಹೋಟೇಲ್ ತಾಂಬೂಲಂ ಪ್ರಾಯೋಜಿತ ಸ್ಮರಣಿಕೆ

ಶ್ರೇಷ್ಠ ಪರಿಕರ 3 : ದಿ। ರವಿಂದ್ರ ಬಿ. ಕೋಟ್ಯಾನ್ ಸ್ಮರಣಾರ್ಥ ಅವರ ಧರ್ಮಪತ್ನಿ ಪ್ರತಿಮಾ ಹಾಗೂ ಮೊಮ್ಮಗಳು ಅನೈರಾ ಅವರ ಕೊಡುಗೆ ತೃತೀಯ ನಗದು ಬಹುಮಾನ ರೂ. 1,000 ಮತ್ತು ಹೋಟೇಲ್ ಡಯಾನಾ ಪ್ರಾಯೋಜಿತ ಸ್ಮರಣಿಕೆ

7. ಶ್ರೇಷ್ಠ ಪ್ರಸಾಧನ 1 : ದಿ। ಉಷಾ ಶಾಂತಾರಾಮ್ ಸ್ಮಾರಕ, ದಿ। ಪಿ. ರಬೀಂದ್ರ ನಾಯಕ ಸ್ಮಾರಕ, ದಿ। ಎಸ್.ಎಲ್. ನಾರಾಯಣ ಭಟ್ ಸ್ಮಾರಕ ಹಾಗೂ ದಿ। ಯು.ಎ.ಪೈ ಸ್ಮಾರಕ ಟ್ರಸ್ಟ್, ಮಣಿಪಾಲ ಇವರಿಂದ ದಿ। ಟಿ. ಉಪೇಂದ್ರ ಪೈ ಮಣಿಪಾಲ ಅವರ ಸ್ಮಾರಕ ಪ್ರಥಮ ನಗದು ಬಹುಮಾನ ರೂ. 3,000 ಮತ್ತು ಡಾ. ಟಿ.ಎಂ.ಎ. ಪೈ ಪ್ರತಿಷ್ಠಾನ ಪ್ರಾಯೋಜಿತ ಸ್ಮರಣಿಕೆ

ಶ್ರೇಷ್ಠ ಪ್ರಸಾಧನ 2 : ರಂಗನಟ ಯು. ಎಂ. ಅಸ್ಲಾಂ ಪ್ರಾಯೋಜಕತ್ವದ ದ್ವಿತೀಯ ನಗದು ಬಹುಮಾನ ರೂ. 2,000 ಮತ್ತು ದಿ। ವಿ. ಪ್ರಭಾಕರ ಹೆಗ್ಡೆ ಸ್ಮಾರಕ ಸ್ಮರಣಿಕೆ

ಶ್ರೇಷ್ಠ ಪ್ರಸಾಧನ 3 : ಶ್ರೀ ಸದಾನಂದ ಸುವರ್ಣ, ಮುಂಬಯಿ ಪ್ರಾಯೋಜಿತ ತೃತೀಯ ನಗದು ಬಹುಮಾನ ರೂ. 1,000 ಮತ್ತು ದಿ। ಮಲ್ಪೆ ಮಧ್ವರಾಜ್ ಸ್ಮಾರಕ ಸ್ಮರಣಿಕೆ

8. ಶ್ರೇಷ್ಠ ರಂಗ ಬೆಳಕು 1 : ಶ್ರೀಮತಿ ಬೀಬಿ ಜಾನ್-ಖಲಂದರ್ ಸಾಬ್, ಅರಸೀಕೆರೆ ಸ್ಮಾರಕ ಅವರ ಪುತ್ರ ಚಾಂದ್ ಭಾಷಾರವರ ಕೊಡುಗೆ ನಗದು ಪ್ರಥಮ ಬಹುಮಾನ ರೂ. 3,000 ಮತ್ತು ಶ್ರೀ ಜನಾರ್ದನ ಮತ್ತು ಮಹಾಕಾಳಿ ದೇವಸ್ಥಾನ, ಅಂಬಲಪಾಡಿ ಪ್ರಾಯೋಜಿತ ಸ್ಮರಣಿಕೆ.

ಶ್ರೇಷ್ಠ ರಂಗ ಬೆಳಕು 2 : ಶ್ರೀಮತಿ ಬೀಬಿ ಜಾನ್-ಖಲಂದರ್ ಸಾಬ್, ಅರಸೀಕೆರೆ ಸ್ಮಾರಕ ಅವರ ಪುತ್ರ ಚಾಂದ್ ಭಾಷಾರವರ ಕೊಡುಗೆ ನಗದು ದ್ವಿತೀಯ ಬಹುಮಾನ ರೂ.2,000 ಮತ್ತು ದಿ। ಡಾ. ಬಿ.ಬಿ. ಶೆಟ್ಟಿ ಸ್ಮಾರಕ ಸ್ಮರಣಿಕೆ

ಶ್ರೇಷ್ಠ ರಂಗ ಬೆಳಕು 3 ಶ್ರೀಮತಿ ಬೀಬಿ ಜಾನ್-ಖಲಂದರ್ ಸಾಬ್, ಅರಸೀಕೆರೆ ಸ್ಮಾರಕ ಅವರ ಪುತ್ರ ಚಾಂದ್ ಭಾಷಾರವರ ಕೊಡುಗೆ ನಗದು ತೃತೀಯ ಬಹುಮಾನ ರೂ.1,000 ಮತ್ತು ಹೋಟೇಲ್ ತಾಂಬೂಲಂ ಪ್ರಾಯೋಜಿತ ಸ್ಮರಣಿಕೆ

9. ಶ್ರೇಷ್ಠ ಹಾಸ್ಯ ನಟನೆ : ಶ್ರೀ ಮಂಡ್ಯ ರಮೇಶ್ ಪ್ರಾಯೋಜಿತ ನಗದು ಬಹುಮಾನ ರೂ. 2,000 ಮತ್ತು ಯು. ಪಿ. ಶೆಣೈ ಪ್ರಾಯೋಜಿತ ಸ್ಮರಣಿಕೆ

10. ಶ್ರೇಷ್ಠ ಬಾಲ ನಟನೆ : ದಿ। ಮಂಜುಳಾ ಸತ್ಯನಾರಾಯಣ ಹೆಗಡೆ ಸ್ಮಾರಕ ಅವರ ಪುತ್ರ ಶ್ರೀಪಾದ ಹೆಗಡೆಯವರ ಕೊಡುಗೆ ನಗದು ಬಹುಮಾನ ರೂ. 1,000 ಮತ್ತು ಹೋಟೇಲ್ ಡಯಾನಾ ಪ್ರಾಯೋಜಿತ ಸ್ಮರಣಿಕೆ

ಸ್ಮರಣಿಕೆಗಳ ಪ್ರಾಯೋಜಕರು : ಡಾ। ಟಿ.ಎಂ.ಎ. ಪೈ ಪ್ರತಿಷ್ಠಾನ ಮಣಿಪಾಲ,
ಶ್ರೀ ಜನಾರ್ಧನ ಮತ್ತು ಮಹಾಕಾಳಿ ದೇವಸ್ಥಾನ ಅಂಬಲಪಾಡಿ,
ವಿ. ಪ್ರಭಾಕರ ಹೆಗ್ಡೆ, ಮಲ್ಪೆ ಮಧ್ವರಾಜ್, ತಾಂಬೂಲಂ ಹೋಟೇಲ್,
ಹೋಟೇಲ್ ಡಯಾನ, ಎಸ್.ಎಲ್.ಎನ್.ಭಟ್, ಯು.ಪಿ.ಶೆಣೈ,
ಸಖೂ ಬ್ಯಾ ಶ್ರೀಧರ ನಾಯಕ್, ಡಾ। ಬಿ.ಬಿ.ಶೆಟ್ಟಿ,
ರೋಟರಿ ಕ್ಲಬ್ ಮಣಿಪಾಲ, ಶ್ರೀನಿವಾಸ ಎಸ್. ಶೆಟ್ಟಿಗಾರ್,
ಕೊಚ್ಚಿಕಾರ್ ಎಸ್.ಎನ್.ಪೈ

*******

ರಿಗೆ,

**ಪ್ರದೀಪ್ ಚಂದ್ರ ಕುತ್ಪಾಡಿ**
ಪ್ರಧಾನ ಕಾರ್ಯದರ್ಶಿ,
ರಂಗಭೂಮಿ (ರಿ.)
ಕುತ್ಪಾಡಿ ಅಂಚೆ, ಉಡುಪಿ – 574 118
**ಮೊಬೈಲ್ ನಂ : 9448952847**

**ಪ್ರವೇಶ ಪತ್ರವನ್ನು ಈ ವಿಳಾಸಕ್ಕೆ ಕಳುಹಿಸಬೇಕು.**

**ಮೊ : 9448952847**
**9844742166**
**9845111449**
**9449367595**

# ನಾಟಕ ಸ್ಪರ್ಧಾ ಸಮಿತಿ, ರಂಗಭೂಮಿ (ರಿ.) ಉಡುಪಿ – ಇವರ
# 45ನೆಯ ರಾಜ್ಯಮಟ್ಟದ ಕನ್ನಡ ನಾಟಕ ಸ್ಪರ್ಧೆ – 2024

## ಪ್ರವೇಶ ಪತ್ರ

| | |
|---|---|
| 1. ಸಂಸ್ಥೆಯ ಹೆಸರು<br>ವ್ಯವಹರಿಸುವ ಸಂಪೂರ್ಣ ವಿಳಾಸ<br>(ಸಂಸ್ಥೆಯ ಪರಿಚಯ ಲೇಖನವನ್ನು ಲಗ್ತೀಕರಿಸಿ) | Post PIN |
| 2. ಮೊಬೈಲ್ ದೂರವಾಣಿ ಸಂಖ್ಯೆ ಹಾಗೂ ವಾಟ್ಸಾಪ್ ನಂಬ್ರ | |
| 3. ಸಂಸ್ಥೆ ಸ್ಥಾಪನೆಗೊಂಡ ವರ್ಷ | |
| 4. ಸಂಸ್ಥೆಯು ರಿಜಿಸ್ಟರ್‌ಗೊಂಡಿದೆಯೇ ಅಥವಾ ಕರ್ನಾಟಕ ನಾಟಕ ಅಕಾಡೆಮಿಯಲ್ಲಿ ನೊಂದಾಯಿಸಲ್ಪಟ್ಟಿದೆಯೇ? ಆಗಿದ್ದರೆ ಯಾವಾಗ? | |
| 5. ಸಂಸ್ಥೆಯ ಊರಿಂದ ಉಡುಪಿಗೆ ಇರುವ ಖಚಿತವಾದ ದೂರ | (ಕಿ.ಮೀ.) |
| 6. ನಾಟಕದ ಹೆಸರು | |
| 7. ನಾಟಕದ ಕಥಾವಸ್ತು<br>(ಸಾಮಾಜಿಕ/ಜಾನಪದ/ಐತಿಹಾಸಿಕ/ಪೌರಾಣಿಕ/ಅಸಂಗತ) | |
| 8. ನಾಟಕ ಪ್ರದರ್ಶನಕ್ಕೆ ತಗಲುವ ಅವಧಿ | |
| 9. ನಾಟಕ ಕರ್ತೃವಿನ ಹೆಸರು ಮತ್ತು ವಿಳಾಸ | |
| 10. ನಿರ್ದೇಶಕನ ಹೆಸರು ಮತ್ತು ಉದ್ಯೋಗ (ಪರಿಚಯ ವಿವರ ಲಗ್ತಿಕರಿಸಿ) | |
| 11. ಪಾತ್ರಧಾರಿಗಳ ಮತ್ತು ಹಿನ್ನಲೆ ಕಲಾವಿದರ ಸಂಖ್ಯೆ :?+? | |
| 12. ಪಾತ್ರ ಪರಿಚಯ, ತಂಡದ ಒಟ್ಟು ಸದಸ್ಯರ ಸಂಖ್ಯೆ ಮತ್ತು ವಿವರ (ಪ್ರತ್ಯೇಕ ಹಾಳೆಯಲ್ಲಿ ಲಗ್ತೀಕರಿಸಿರಿ) | |
| 13. ನಾಟಕದ ಹಿಂದಿನ ಪ್ರದರ್ಶನಗಳ ವಿವರ<br>(ಫೋಟೋದೊಂದಿಗೆ ಪ್ರತ್ಯೇಕ ಹಾಳೆ ಲಗ್ತೀಕರಿಸಿರಿ)<br>( ವಿಡಿಯೋ ಕ್ಲಿಪಿಂಗ್‌ನ್ನು 9448952847 ಗೆ ವಾಟ್ಸಾಪ್ ಮಾಡಿ) | |
| 14. ನಾಟಕದ ಪ್ರತಿಯನ್ನು ಲಗ್ತೀಕರಿಸಲಾಗಿದೆಯೇ? | |
| 15. ತಂಡವು ಇದುವರೆಗೆ ಪ್ರದರ್ಶಿಸಿರುವ ಇತರ ನಾಟಕಗಳ ಹೆಸರುಗಳು. | |
| 16. ಪ್ರವೇಶ ಶುಲ್ಕದ ಬಗ್ಗೆ ಲಗ್ತೀಕರಿಸಿದ ಡ್ರಾಫ್ಟ್ ನಂಬ್ರ ಮತ್ತು ಬ್ಯಾಂಕಿನ ಹೆಸರು | |
| 17. ಕಾರಣಾಂತರದಿಂದ ನಿಮ್ಮ ಪ್ರವೇಶ ಪತ್ರ ಅಸ್ವೀಕೃತವಾದಲ್ಲಿ ಯಾವ ವಿಳಾಸಕ್ಕೆ ಪ್ರವೇಶ ಶುಲ್ಕದ ನಿಮ್ಮ ಬ್ಯಾಂಕ್ ಡ್ರಾಫ್ಟ್‌ನ್ನು ಮರಳಿಸಬೇಕು? | |
| 18. ಸ್ಪರ್ಧೆಯಲ್ಲಿ ಭಾಗವಹಿಸಲು ತಂಡಕ್ಕೆ ಅನುಕೂಲವಿರುವ ಎರಡು ದಿನಾಂಕಗಳು (ಆದ್ಯತೆಯ ಮೇರೆಗೆ) (ಅಂತಿಮ ಅಲ್ಲ) | |

(ಇತರ ವಿವರಗಳಿದ್ದರೆ ಪ್ರತ್ಯೇಕ ಹಾಳೆಯಲ್ಲಿ ಲಗ್ತೀಕರಿಸಿರಿ)

"ನಾಟಕ ಸ್ಪರ್ಧಾ ಸಮಿತಿ"ಯು ಸೂಚಿಸಿದ ನಿಯಮಗಳಿಗೆ ನಾವು ಬದ್ಧರಾಗಿದ್ದೇವೆ. ಮೇಲಿನ ವಿವರಗಳು ಸತ್ಯವಾಗಿವೆ.

ದಿನಾಂಕ :
ಸ್ಥಳ :

**ಸಂಸ್ಥೆಯ ಮುದ್ರೆ ಮತ್ತು ವ್ಯವಸ್ಥಾಪಕರ ಸಹಿ**